81 (815) ಶ್ರೀ ಡಿ,ಕೆ. ಶಿವಕುಮಾರ್ (ಕನಕಪುರ ಕ್ಷೇತ್ರ) :– ಕಂದಾಯ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕಿನಲ್ಲಿ ಈಗಾಗಲೇ ಮಂಜೂರಾಗಿರುವ ಬಗರ್–ಹುಕುಂ ಸಾಗುವಳಿದಾರರಲ್ಲಿ ಎಷ್ಟು ಫಲಾನುಭವಿಗಳಿಗೆ ಪೋಡಿ ದುರಸ್ತಿ ಮಾಡಲಾಗಿದೆ?

ಆ) ಹಲವಾರು ವರ್ಷಗಳಿಂದ ಪೋಡಿ ದುರಸ್ತಿಗೊಳಿಸದೆ ವಿಳಂಬ ಗೊಂಡಿರುವುದಕ್ಕೆ ಕಾರಣಗಳೇನು?

ಇ) ಪೋಡಿ ದುರಸ್ತಿ ಕಾರ್ಯ ಕೈಗೊಳ್ಳದಿದ್ದಲ್ಲಿ ಯಾವ ಕ್ರಮ ತೆಗೆದುಕೊಳ್ಳಲಾಗಿದೆ?

ಶ್ರೀ ಜಿ. ಕರುಣಾಕರರೆಡ್ಡಿ (ಕಂದಾಯ ಸಚಿವರು) :–

ಅ) ಕನಕಪುರ ತಾಲ್ಲೂಕಿನಲ್ಲಿ ಬಗರ್–ಹುಕುಂ ಸಾಗುವಳಿ ಮೂಲಕ ಮಂಜೂರಾದ 9798 ಫಲಾನುಭವಿಗಳ ಪೈಕಿ 1671 ಪ್ರಕರಣಗಳಲ್ಲಿ ಪೋಡಿ ದುರಸ್ತಿ ಮಾಡಲಾಗಿದೆ.

ಆ) ಪೋಡಿ ದುರಸ್ತಿ ಕಾರ್ಯ ವಿಳಂಬವಾಗಿರುವುದಕ್ಕೆ ಈ ಕೆಳಕಂಡ ಕಾರಣಗಳು ಮುಖ್ಯವಾಗಿರುತ್ತವೆ.

1) ಫಲಾನುಭವಿಗಳಿಗೆ ಮಂಜೂರಾದ ಜಮೀನು ಹಾಗೂ ಅವರು ವಾಸ್ತವವಾಗಿ ಅನುಭವದಲ್ಲಿರುವ ವಿಸ್ತೀರ್ಣದಲ್ಲಿ ವ್ಯತ್ಯಾಸ ಇರುವುದು.
2) ಜಮೀನು ಮಂಜೂರಾತಿ ಆದೇಶ ಲಭ್ಯವಿಲ್ಲದೇ ಇರುವುದು.
3) ಮಂಜೂರಿದಾರರು ಜಮೀನು ಮಾರಾಟ ಮಾಡಿ ಅನುಭವದಲ್ಲಿ ಇರದಿರುವುದು.
4) ಭೂಮಾಪಕರ ಕೊರತೆಯಿಂದಾಗಿ.

ಇ) ರಾಜ್ಯದಲ್ಲಿ ಪೋಡಿ ದುರಸ್ತಿ ಕಾರ್ಯ ವಿಳಂಬವಾಗುತ್ತಿರುವುದನ್ನು ಪರಿಗಣಿಸಿ, ಶೀಘ್ರ ವಿಲೇವಾರಿಗಾಗಿ ಸರ್ಕಾರದ ಸುತ್ತೋಲೆ ಸಂಖ್ಯೆ:ಕಂಇ 197 ಭೂದಾಸ 2008, ದಿನಾಂಕ 18–08–2008 ರಲ್ಲಿ ವಿಶೇಷ ದರಖಾಸ್ತು ಪೋಡಿ ಅಂದೋಲನ ಹಮ್ಮಿಕೊಳ್ಳುವ ಬಗ್ಗೆ ಸೂಚನೆ ನೀಡಲಾಗಿದೆ. ಇದರಂತೆ ಪ್ರತಿ ತಾಲ್ಲೂಕು ತಹಶೀಲ್ದಾರ್ ಕಛೇರಿಗಳಲ್ಲಿ ಪೋಡಿ ಆಂದೋಲನ ಕೈಗೊಳ್ಳಲು ಭೂಮಂಜೂರಾತಿ ವಿವರ, ಬಗರ್–ಹುಕುಂ ಸಾಗುವಳಿ ವಿವರ, ಜಮೀನು ಸ್ವಾಧೀನ ಹಾಗೂ ಲೀಸ್ ಇತ್ಯಾದಿ ವಿವರಗಳನ್ನು ನಿಗದಿತ ನಮೂನೆ 1 ರಿಂದ 5 ರಲ್ಲಿ ಸಿದ್ಧಪಡಿಸುವ ಕಾರ್ಯ ಪ್ರಗತಿಯಲ್ಲಿರುತ್ತದೆ.

ಸರ್ಕಾರದ ಆದೇಶ ಸಂಖ್ಯೆ: ಕಂಇ 155 ಭೂದಾಸ 2009, ದಿನಾಂಕ: 21–05–2010 ರಲ್ಲಿ ಭೂಮಾಪನ ಇಲಾಖೆಗೆ 2010–11ನೇ ಸಾಲಿನಲ್ಲಿ 400 ಭೂಮಾಪಕರ ಹುದ್ದೆಗಳು, 300 ಪರ್ಯಾವೇಕ್ಷಕರ ಹುದ್ದೆಗಳು ಹಾಗೂ 150 ಅಧೀಕ್ಷಕರು (ಕಾ.ನಿ)

ಹುದ್ದೆಗಳು ಮಂಜೂರು ಮಾಡಲಾಗಿದೆ ಹಾಗೂ 2011–12 ನೇ ಸಾಲಿನಲ್ಲಿ 800 ಭೂಮಾಪಕರ ಹೆಚ್ಚುವರಿ ಹುದ್ದೆಗಳನ್ನು ಸಹ ಮಂಜೂರು ಮಾಡಲಾಗಿದೆ.

ತಹಶೀಲ್ದಾರ್ ಕಛೇರಿಗಳಲ್ಲಿ ಕೆಲಸದ ಒತ್ತಡದಿಂದ ಪೋಡಿ ಅಳತೆ ಮತ್ತು ದುರಸ್ತಿ ಕಾರ್ಯ ನಿಧಾನಗತಿಯಲ್ಲಿ ನಡೆದಿರುವುದನ್ನು ಗಮನಿಸಲಾಗಿದೆ. ಹಾಲಿ ಇರುವ ಪದ್ಧತಿಯನ್ನು ಸರಳೀಕರಣ ಗೊಳಿಸಿ ಬಾಕಿ ಇರುವ ದರಖಾಸ್ತು/ಬಗರ್–ಹುಕುಂ ಪೋಡಿ ಪ್ರಕರಣಗಳನ್ನು ಶೀಘ್ರವಾಗಿ ವಿಲೇವಾರಿ ಮಾಡುವ ಬಗ್ಗೆ ಸರ್ಕಾರವು ಕ್ರಮ ಕೈಗೊಳ್ಳುವುದು.

ನಂಜುಂಡಪ್ಪ ವರದಿ

82 (431) ಶ್ರೀ ಬಂಡೆಪ್ಪ ಕಾಶೆಂಪೂರ್ (ಬೀದರ್ ದಕ್ಷಿಣ) :– ಮಾನ್ಯ ಸಣ್ಣ ನೀರಾವರಿ ಯೋಜನೆ ಮತ್ತು ಸಾಂಖ್ಯಿಕ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಕಳೆದ 2 ವರ್ಷಗಳಲ್ಲಿ ನಂಜುಂಡಪ್ಪ ವರದಿಯ ಅನುಷ್ಠಾನಕ್ಕಾಗಿ ನಿಗದಿಪಡಿಸಿದ ಅನುದಾನದ ಮೊತ್ತ ಎಷ್ಟು (ವರ್ಷವಾರು ವಿವರಗಳನ್ನು ನೀಡುವುದು)

ಆ) ನಿಗದಿಪಡಿಸಿದ್ದ ಅನುದಾನವನ್ನು ಸಮರ್ಪಕವಾಗಿಬಳಸಿಕೊಳ್ಳಲಾಗಿದೆಯೇ

ಇ) ಹಾಗಿದ್ದಲ್ಲಿ, ಯಾವ ಯಾವ ಯೋಜನೆಗಳಿಗಾಗಿ ಬಳಸಿಕೊಳ್ಳಲಾಗಿದೆ (ವಿವರಗಳನ್ನು ನೀಡುವುದು)

ಈ) ನಿಗದಿಪಡಿಸಿದ್ದ ಅನುದಾನದಲ್ಲಿ ಯಾವ ಯಾವ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ.

ಉ) ಕಾಮಗಾರಿಗಳಿಗಾಗಿ ಖರ್ಚು ಮಾಡಲಾಗಿರುವ ಮೊತ್ತದ ಬಗ್ಗೆ ಮೌಲ್ಯಮಾಪನ ಮಾಡಲಾಗಿದೆಯೇ?

ಶ್ರೀ ಗೋವಿಂದ ಎಂ. ಕಾರಜೋಳ (ಮಾನ್ಯ ಸಣ್ಣ ನೀರಾವರಿ ಯೋಜನೆ ಮತ್ತು ಸಾಂಖ್ಯಿಕ ಸಚಿವರು) :–

ಅ) ಕಳೆದ 2 ವರ್ಷಗಳಲ್ಲಿ ನಂಜುಂಡಪ್ಪ ವರದಿಯ ಅನುಷ್ಠಾನಕ್ಕಾಗಿ ನಿಗದಿಪಡಿಸಿದ ಅನುದಾನದ ಮೊತ್ತ ಈ ರೀತಿ ಇದೆ:

2008–09: 2547 ಕೋಟಿ ರೂ.ಗಳು

2009–10: 2579 ಕೋಟಿ ರೂ.ಗಳು

ಆ) ನಿಗದಿಪಡಿಸಿದ್ದ ಅನುದಾನವನ್ನು ಸಮರ್ಪವಾಗಿ ಬಳಸಿಕೊಳ್ಳಲಾಗಿದೆ.

ಇ) ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ.

ಈ) ಯೋಜನಾವಾರು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಉ) ಆಯ್ದ ಕೆಲವು ಕಾಮಗಾರಿಗಳ ಅನುಷ್ಠಾನದ ಕುರಿತು ಮೌಲ್ಯಮಾಪನ ಮಾಡಲಾಗುತ್ತಿದೆ.